**ಕರ್ನಾಟಕ ಸರ್ಕಾರ**

**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಅರಸೀಕೆರೆ.**

**ಸಿ.ಸಿ. ನಂ.3139 /2015**

| | | |
|---|---|---|
| ಹೆಸರು | ನಂಜೇಗೌಡ | ಸಿ. ಡಬ್ಲ್ಯೂ ಃ 7 |
| ತಂದೆಯ ಹೆಸರು | ನಿಂಗೇಗೌಡ | ಪಿ. ಡಬ್ಲ್ಯೂ ಃ 4 |
| ವಯಸ್ಸು | 65 ವರ್ಷ | |
| ಉದ್ಯೋಗ | ವ್ಯವಸಾಯ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ |
| ವಾಸ | ಗಿಡ್ಡೇಗೌಡನಕೊಪ್ಪಲು ಗ್ರಾಮ | ದಿಃ 07-10-2021 |

**ಮುಖ್ಯ ವಿಚಾರಣೆಃ ಎ.ಪಿ.ಪಿ ರವರಿಂದಃ**

2015 ನೇ ಇಸವಿಯಲ್ಲಿ ಚಾಸಾ 1 ರವರು ನನಗೆ ಕರೆ ಮಾಡಿ ಆರೋಪಿತರು ಜಮೀನು ವಿಷಯವಾಗಿ ಜಗಳ ತೆಗೆದು ಹಲ್ಲೆ ಮಾಡಿರುತ್ತಾರೆಂದು ತಿಳಿಸಿರುತ್ತಾರೆ . ನಾವು ಸ್ಥಳಕ್ಕೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋಗಿ ನೋಡಿದಾಗ ಚಾಸಾ 1 ರವರಿಗೆ ತಲೆಗೆ ಏಟಾಗಿದ್ದು ಕೆಳಗೆ ಬಿದ್ದಿರುತ್ತಾರೆ. ಚಾಸಾ 1 ರವರನ್ನು ನಾವು ಗಂಡಸಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿಸಲಾಯಿತು)**

**ಪಾಟೀ ಸವಾಲು ಃ ಎ.ಪಿ.ಪಿ ರವರಿಂದಃ**

ದಿಃ 06-07-20145 ರಂದು ಮಧ್ಯಾಹ್ನ 3.00 ಗಂಟೆಗೆ ಕರೆ ಬಂದಿರುತ್ತದೆ ಎಂದರೆ ಸರಿ . ಆರೋಪಿತರು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ದೊಣ್ಣೆಯಿಂದ ತಲೆಯ ಎಡಭಾಗಕ್ಕೆ ಹಲ್ಲೆ ಮಾಡಿರುತ್ತಾರೆಂದು ತಿಳಿಸಿರುತ್ತಾರೆಂದರೆ ಸರಿ . 3 ನೇ ಆರೋಪಿಯು ಕೊರಳ ಪಟ್ಟಿ ಹಿಡಿದುಕೊಂಡು ಕೈಯಿಂದ ಎದೆಗೆ ಗುದ್ದಿ , 2 ನೇ ಆರೋಪಿಯು ಕಾಲಿನಿಂದ ಪಕ್ಕೆಗೆ ನೋವುಂಟು

ಮಾಡಿರುತ್ತಾರೆಂದು ತಿಳಿಸಿರುತ್ತಾರೆಂದರೆ ಸರಿ . ಆರೋಪಿತರು ಜೀವ ಬೆದರಿಕೆ ಹಾಕಿರುತ್ತಾರೆಂದು ಕರೆ ಮಾಡಿ ತಿಳಿಸಿರುತ್ತಾರೆಂದರೆ ಸರಿ .

**ಪಾಟೀ ಸವಾಲುಃ** ಶ್ರೀ ಓ ಎ ಎಸ್ **ವಕೀಲರಿಂದ ಃ**

ಚಾಸಾ 1 ನನ್ನ ಅಳಿಯನಾಗಬೇಕೆಂದರೆ ಸರಿ . ಚಾಸಾ 1 ರವರೇ ನನಗೆ ಕರೆ ಮಾಡಿ ತಿಳಿಸಿರುತ್ತಾರೆ. ನಾನು ಕರೆ ಮಾಡಿದಾಗ ಊರಲ್ಲಿ ಇದ್ದೆ. ನಮ್ಮೂರಿನಿಂದ ಸ್ಥಳಕ್ಕೆ 4 ಕಿಮೀ ಅಂತರವಿರುತ್ತದೆ. ನಮ್ಮ ಊರಿನಿಂದ ಘಟನಾ ಸ್ಥಳಕ್ಕೆ ಬೈಕಿನಲ್ಲಿ 3 ರಿಂದ 4 ನಿಮಿಷಕ್ಕೆ ಹೋಗಬಹುದು. ನಾನು ಸ್ಥಳಕ್ಕೆ ಹೋದಾಗ ಚಾಸಾ 1 ರಿಂದ 3 ರವರು ಹಾಜರಿದ್ದರು. ಚಾಸಾ 1 ರವರನ್ನು ಬೈಕ್ ನಲ್ಲಿಯೇ ಕರೆದುಕೊಂಡು ಆಸ್ಪತ್ರೆಗೆ ಬಂದಿರುತ್ತೇನೆ. ಲಾಳನಕೆರೆಯಿಂದ ಗಂಡಸಿಗೆ 5 ನಿಮಿಷದಲ್ಲಿ ಬರಬಹುದೆಂದರೆ ಸರಿ . ಅರಸೀಕೆರೆ ಆಸ್ಪತ್ರೆಗಿಂತ ಗಂಡಸಿ ಆಸ್ಪತ್ರೆ ಸಮೀಪವಿರುತ್ತದೆ ಎಂದರೆ ಸರಿ . ಚಾಸಾ 1 ರವರಿಗೆ ಆರೋಪಿತರು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ತಲೆಯ ಯಾವ ಭಾಗದಲ್ಲಿ ರಕ್ತ ಬರುತ್ತಿತ್ತು ಎಂದು ಹೇಳಲು ಬರುವುದಿಲ್ಲ. ಆರೋಪಿತರಿಗೂ ಪಿರ್ಯಾದಿಯರಿಗೂ ಜಮೀನು ವಿಷಯದಲ್ಲಿ ವ್ಯಾಜ್ಯ ಇತ್ತೆಂದರೆ ಸರಿ . ಜಮೀನು ವಿಷಯ ವ್ಯಾಜ್ಯ ವಿರುವುದರಿಂದ ಚಾಸಾ 1 ರವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದೇನೆಂದರೆ ಸರಿಯಲ್ಲ. ಯಾವುದೇ ಗಲಾಟೆ ನಡೆಯದಿದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಇ ಒ**

(ಶ್ರೀ ಅಮಿತ್ ಘಟ್ಟಿ)
**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಅರಸೀಕೆರೆ.**